

ಶುಭನುಡಿ
ಈ ಬದುಕೆನ್ನುವುದು ಆಕಸ್ಮಿಕ ಘಟನೆಗಳ ಸರಣಿ, ಪಯಣ ಸುಗಮವಾಗಲು ಬದಲಾವಣೆಗೆ ಸದಾ ಸಿದ್ಧರಾಗಿ!
| ಲಾವೋ ತ್ಸು

# ವಿಜಯವಾಣಿ

ಡಾ| ವಿಜಯ ಸಂಕೇಶ್ವರ ಸಾರಥ್ಯದಲ್ಲಿ

ಕನ್ನಡಿಗರ ಧ್ವನಿ

ನಂ.1 ಕನ್ನಡ ದಿನಪತ್ರಿಕೆ

ಬೆಳಗಾವಿ
17 ಡಿಸೆಂಬರ್ 2014
ಬುಧವಾರ
ಪುಟ 14+2+4
₹4
c

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● BELAGAVI 17 DECEMBER 2014 ● ಸಂಪುಟ 2 ● ಸಂಚಿಕೆ 167 ● www.epapervijayavani.in

# ಜರ್ಮನ್ ಕಂಪನಿ ಜತೆ ವಿಟಿಯು ಒಪ್ಪಂದ

**ದಾವಣಗೆರೆ:** ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಜರ್ಮನಿ ಮೂಲದ 'ಬಾಷ್' ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳಿಗೆ ಉನ್ನತಮಟ್ಟದ ತರಬೇತಿ ನೀಡುವ ಯೋಜನೆ ಸಿದ್ಧಗೊಂಡಿದೆ.

ಒಪ್ಪಂದದ ಭಾಗವಾಗಿ ಯುಬಿಡಿಟಿ ಕಾಲೇಜಿನಲ್ಲಿ 13 ಕೋಟಿ ರೂ. ವೆಚ್ಚದಲ್ಲಿ 7 ಅತ್ಯಾಧುನಿಕ ಪ್ರಯೋಗಾಲಯಗಳು ತಲೆ ಎತ್ತುತ್ತಿದ್ದು, ರಾಜ್ಯದ ಅತ್ಯಂತ ಹಳೆಯ ಇಂಜಿನಿಯರಿಂಗ್ ಕಾಲೇಜು ಹೈಟೆಕ್ ಸ್ಪರ್ಶ ಪಡೆಯುತ್ತಿದೆ.

**ದಾವಣಗೆರೆ ಯುಬಿಡಿಟಿ ಕಾಲೇಜಿನಲ್ಲಿ 13 ಕೋಟಿ ರೂ. ವೆಚ್ಚದ ಪ್ರಯೋಗಾಲಯ**

> "ಪ್ರಾಧ್ಯಾಪಕರು, ವಿದ್ಯಾರ್ಥಿಗಳಿಗೆ ಅತ್ಯುತ್ತಮ ತರಬೇತಿ ನೀಡುವ ದೃಷ್ಟಿಯಿಂದ ಬಾಷ್ ಕಂಪನಿಯೊಂದಿಗೆ ವಿವಿ ಕೈಜೋಡಿಸಿದೆ. ಈಗಾಗಲೇ ಯಂತ್ರೋಪಕರಣಗಳು ಬಂದಿದ್ದು, ಶೀಘ್ರವೇ ಪ್ರಯೋಗಾಲಯಗಳು ಅಸ್ತಿತ್ವಕ್ಕೆ ಬರಲಿವೆ.
>
> | ಎಚ್. ಮಹೇಶಪ್ಪ, ವಿಟಿಯು ಕುಲಪತಿ

ರೋಬೋಟಿಕ್ಸ್, ಸಿಎನ್‌ಸಿ, ಇಂಡಸ್ಟ್ರಿಯಲ್ ಎಲೆಕ್ಟ್ರಾನಿಕ್ಸ್, ಪಿಎಲ್‌ಸಿ, ಹೈಡ್ರಾಲಿಕ್ಸ್ ಆ್ಯಂಡ್ ನ್ಯುಮ್ಯಾಟಿಕ್ಸ್, ಫ್ಲೆಕ್ಸಿಬಲ್ ಮೆಷಿನರಿಗೆ ಸಂಬಂಧಿಸಿದ ಪ್ರಯೋಗಾಲಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಈಗಾಗಲೇ ಜರ್ಮನಿಯಿಂದ ಉನ್ನತ ತಂತ್ರಜ್ಞಾನದ ದುಬಾರಿ ಯಂತ್ರಗಳು ಕಾಲೇಜು ಕ್ಯಾಂಪಸ್‌ಗೆ ಕಾಲಿಟ್ಟಿವೆ.

'ಬಾಷ್' ಕಂಪನಿ ತಜ್ಞರು ಇಲ್ಲಿಗೆ ಬಂದು ಕಾಲೇಜಿನ ಆಯ್ದ ಪ್ರಾಧ್ಯಾಪಕರಿಗೆ ಯಂತ್ರಗಳ ಬಳಕೆ ಬಗ್ಗೆ ತರಬೇತಿ ನೀಡಲಿದ್ದು, ನಂತರ ವಿದ್ಯಾರ್ಥಿಗಳು ಅದರ ಪ್ರಯೋಜನ ಪಡೆಯಲಿದ್ದಾರೆ. ಆಧುನಿಕ ಉದ್ಯಮಗಳಲ್ಲಿರುವ ಗುಣಮಟ್ಟದ ಯಂತ್ರಗಳು ಪ್ರಯೋಗಾಲಯದಲ್ಲೇ ಸಿಗುವುದರಿಂದ ವಿದ್ಯಾರ್ಥಿಗಳ ಕ್ಷಮತೆಯೂ ಹೆಚ್ಚಾಗಲಿದೆ. ಕೈಗಾರಿಕೆ ವಲಯದಲ್ಲಿ ಅವಕಾಶ ಗಿಟ್ಟಿಸಲು ವಿದ್ಯಾರ್ಥಿಗಳಿಗೆ ಸಹಕಾರಿಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.